# ಬೋಧನಾ-ಕಲಿಕಾ ಸಾಮಗ್ರಿ: ಹಾಗೆಂದರೇನು, ಏಕೆ, ಎಂತು?

ಆಂಗ್ಲಮೂಲ: ಚಂದ್ರಿಕಾ ಮುರಳೀಧರ್
ಮತ್ತು ರೋನಿತಾ ಶರ್ಮಾ

ಹೆಚ್ಚು-ಕಡಿಮೆ ಎರಡು ದಶಕಗಳಿಂದ ಪಾಠ ಮಾಡುತ್ತಿರುವ ನಮಗೆ ಈ ವರ್ಷದ ಮೊದಲಿಗೆ "ಬೋಧನಾ-ಕಲಿಕಾ ಸಾಮಗ್ರಿ" ಎಂಬುದನ್ನು ಕೇಳಿ ವಿಸ್ಮಯವಾದದ್ದು ನಿಜ. ಅದು ಮೂಲಭೂತ ಪ್ರಶ್ನೆಗಳನ್ನೇ ಹುಟ್ಟುಹಾಕಿತು. ಬೋಧನಾ-ಕಲಿಕಾ ಸಾಮಗ್ರಿ ಎಂದರೇನು? ಅದನ್ನು ನಾವು ಹೇಗೆ ಬಳಸಬೇಕು? ನಾವದನ್ನು ಬಳಸುತ್ತಿದ್ದೇವೆ ಎಂಬ ನಿಜವಾದ ಅರಿವಿಲ್ಲದೆ ನಮ್ಮ ಬೋಧನೆಯಲ್ಲಿ ನಾವು ಅದನ್ನು ಬಳಸಲಿದ್ದೇವೆಯೆ? ಹಾಗೆ ಬಳಸಲು ಸಾಧ್ಯವೆ? ನಮಗೆ ಬೋಧನಾ-ಕಲಿಕಾ ಸಾಮಗ್ರಿಗಳನ್ನು ಕೊಟ್ಟರೆ, ಅವುಗಳನ್ನು ಬಳಸುವುದು ಹೇಗೆ? ನಾವು ಬಳಸಲು ಅರಿಯದ ಅಥವಾ ಬಳಸಲು ಬಯಸದ ಸಾಮಗ್ರಿಯನ್ನು ಬಳಸುವಂತೆ ನೀಡುವ ವಿಚಾರಕ್ಕೆ ನಾವು ಪ್ರತಿರೋಧ ತೋರುತ್ತೇವೆಯೆ? ಇಂತಹ ಹಲವಾರು ಪ್ರಶ್ನೆಗಳು ಏಳಬಹುದು; ನಾವು ಬಳಸಿರುವ ಹಾಗೂ ಇತರರು ಅತಿ ಪರಿಣಾಮಕಾರಿಯಾಗಿ ಬಳಸಿರುವುದನ್ನು ನೋಡಿರುವ ಕೆಲವು ವಿಜ್ಞಾನ ಮತ್ತು ಸಮಾಜವಿಜ್ಞಾನಗಳಿಗೆ ಸಂಬಂಧಿಸಿದ ಸಾಮಗ್ರಿಗಳ ವಿಷಯವಾಗಿ ನಮ್ಮ ತಿಳುಳಿವಳಿಕೆಯನ್ನು ಇಲ್ಲಿ ಪ್ರಸ್ತುತಪಡಿಸಲಿದ್ದೇವೆ.

ಉನ್ನತ ಪ್ರೌಢಶಾಲಾ ತರಗತಿಗಳಿಗೆ ಅಥವಾ ಒಂದೆರಡು ಪ್ರೌಢಶಾಲಾ ತರಗತಿಗಳಿಗೆ ಬೋಧಿಸುವಂತಹ ಶಿಕ್ಷಕರಿಗೆ ಬೋಧನಾ-ಕಲಿಕಾ ಸಾಮಗ್ರಿಯಾಗುವ ವಸ್ತುವಿನ ಗುಣಲಕ್ಷಣಗಳೇನು? ವಿದ್ಯಾರ್ಥಿಗಳು ಗ್ರಹಿಸುವಂತೆ, ವಿಶ್ಲೇಷಿಸುವಂತೆ, ಅದರಿಂದ ತೀರ್ಮಾನಗಳನ್ನು ಹೊರಸೆಳೆಯುವಂತೆ, ಅದನ್ನು ಪ್ರಯೋಗಿಸುವ, ಹಾಗೂ, ಬಹುಶಃ, ಅದಕ್ಕೆ ಸಂಬಂಧಿಸಿದ ಇತರ ಪರಿಕಲ್ಪನೆಗಳ ಜೊತೆಗಿನ ಸಂಬಂಧಗಳನ್ನು ವಿದ್ಯಾರ್ಥಿಗಳು ಹೊರಗೆಡಹುವಂತೆ ವಿಜ್ಞಾನ ಅಥವಾ ಸಮಾಜವಿಜ್ಞಾನದ ಪರಿಕಲ್ಪನೆಯೊಂದನ್ನು ದಾಟಿಸಲು ನೆರವಾಗುವ ಯಾವುದೇ ವಸ್ತುವನ್ನು ಬೋಧನಾ-ಕಲಿಕಾ ಸಾಮಗ್ರಿ ಎನ್ನಬಹುದಾಗಿದೆ. ಈ ರೀತಿಯ ಭೌತಿಕ ಉತ್ತೇಜನಗಳು ವಿದ್ಯಾರ್ಥಿಯು ಚರ್ಚಿಸಲಾಗುತ್ತಿರುವ ವಿಷಯದಾಚೆಗೆ ಯೋಚಿಸುವಂತೆ, ಹಾಗೂ, ಬಹುಶಃ, ಮುಂದಿನ ಅನ್ವೇಷಣೆಗೆ ಹಾದಿ ತೋರುವಂತೆ ಮಾಡುವ ಸಾಮರ್ಥ್ಯ ಹೊಂದಿವೆ ಎಂದು ನಿರೀಕ್ಷಿಸುವುದು ಮಹತ್ವಾಕಾಂಕ್ಷೆ ಎನಿಸಿಕೊಳ್ಳುತ್ತದೆಯೆ? ನಮ್ಮ ಉತ್ತರ, ಬಹುಶಃ ಇಲ್ಲ ಎಂಬುದಾಗಿದೆ. ಹೀಗಾಗಿ, ನಿರ್ದಿಷ್ಟ ಪರಿಕಲ್ಪನೆಯೊಂದನ್ನು ಬೋಧಿಸುವಾಗ ನಿರೂಪಿತ ಉದ್ದೇಶಗಳನ್ನು ಸಾಧಿಸುವಲ್ಲಿ ನಮ್ಮ ಬೆಂಬಲಕ್ಕೆ ನಿಲ್ಲುವ ಸಾಮಗ್ರಿಯಿದು ಎನ್ನಬಹುದು. ನಾವು ಉದ್ದೇಶಪೂರ್ವಕವಾಗಿಯೇ "ಬೆಂಬಲ" ಎಂಬ ಪದವನ್ನು ಬಳಸಿದ್ದೇವೆ; ಏಕೆಂದರೆ, ಶಿಕ್ಷಕರಾದ ನಮಗೆ ಅದು ಬೆಂಬಲವೇ ಸರಿ. ಅದು ಚರ್ಚಿಸಲಾಗುವ ಪರಿಕಲ್ಪನೆಯನ್ನು ವಿಶದಪಡಿಸಲು ನೆರವಾಗುತ್ತದಲ್ಲದೆ, ಪ್ರಸ್ತುತಪಡಿಸಲಾಗುವ ಯಾವುದೇ ವಿಚಾರವನ್ನು ವಿದ್ಯಾರ್ಥಿಯ ಮನಸ್ಸಿನಲ್ಲಿ ಬಲಪಡಿಸುವ ಸಾಮರ್ಥ್ಯ ಅದಕ್ಕಿರುತ್ತದೆ. ನಮ್ಮ ತರಗತಿಗಳಲ್ಲಿ ಗ್ರಹಣಶಕ್ತಿಯ ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿದ ಮಕ್ಕಳು ಇರುತ್ತಾರೆ. ಅವರಲ್ಲಿ ಕೆಲವರು ದೃಷ್ಟಿಗೋಚರ ಮಾಡಿಕೊಳ್ಳುವ ಮೂಲಕ ಕಲಿತರೆ, ಮತ್ತಿತರರು ಶ್ರವಣಗೋಚರ ಮಾಡಿಕೊಳ್ಳುವ ಮೂಲಕ ಕಲಿಯುತ್ತಾರೆ. ಇಂತಾಗಿ, ಶಿಕ್ಷಕರು ತರಗತಿಯಲ್ಲಿ ಬಳಸುವ ಬೋಧನಶೈಲಿಗೆ ಬೋಧನಾ-ಕಲಿಕಾ ಸಾಮಗ್ರಿಯು ಒದಗಿಬರಬೇಕು ಹಾಗೂ ಪರಿಕಲ್ಪನೆಯ ಬಗೆಗಿನ ವಿದ್ಯಾರ್ಥಿಯ ತಿಳುವಳಿಕೆಯನ್ನು ಪೋಷಿಸಬೇಕು. ಈ ಸಾಮಗ್ರಿಗಳ ಬಳಕೆಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ, ಕಲಿಕಾರ್ಥಿಗೆ ಅದು ಕೊಡಮಾಡುವ ಕಲಿಕಾ-ಅನುಭಗಳ ವಿಚಾರ; ತನ್ಮೂಲಕ

ಇದು ಇಡೀ ತರಗತಿಯ ಕಲಿಕಾ-ಫಲಿತಾಂಶಗಳನ್ನು ಪ್ರತಿಫಲಿಸುತ್ತದೆ. ನೂತನ ಶಿಕ್ಷಕರೊಬ್ಬರು ಹಾಗೂ ಅವರು ತಮ್ಮ ತರಗತಿಗಾಗಿ ತಯಾರಾಗುವ ಪ್ರಕ್ರಿಯೆಯನ್ನು ನಾವೀಗ ಪರಿಗಣಿಸೋಣ. ಆರಂಭಿಕ ಸಾಮಗ್ರಿಯಾಗಿ ಅವರ ಬಳಿ ಇರುವುದಾದರೂ ಏನು? ನಮ್ಮೆಲ್ಲರ ಒಕ್ಕೊರಲಿನ ಉತ್ತರ ಪಠ್ಯಪುಸ್ತಕ ಎಂಬುದಾಗಿರುತ್ತದೆ ಅಂದುಕೊಳ್ಳುತ್ತೇವೆ. ಇದು ನಮ್ಮ ಪ್ರೀತಿಪಾತ್ರ ಸಹೋದ್ಯೋಗಿ ಮತ್ತು ಸಹಶಿಕ್ಷಕರೊಬ್ಬರ ವಿಷಯಕ್ಕೆ ಹಾಗೂ ಅವರ ತರಗತಿಯಲ್ಲಿ ಪಠ್ಯಪುಸ್ತಕವು ನಿರ್ವಹಿಸುತ್ತಿದ್ದ ಪಾತ್ರವನ್ನು ಕುರಿತಾದ ಚರ್ಚೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಪಠ್ಯಪುಸ್ತಕದ ವಿಷಯವಾಗಿ ಅವರು ಹೀಗೆ ಹೇಳುತ್ತಾರೆ:

1. ಪಠ್ಯಪುಸ್ತಕವು ತರಗತಿಯನ್ನು ಪ್ರವೇಶಿಸುವ ಶಿಕ್ಷಕರ ಬತ್ತಳಿಕೆಯ ಅತಿಮುಖ್ಯ ಭಾಗವಾಗಿರುತ್ತದೆ. ಅಂದರೆ, ಅದು ಅವರಿಗೆ ಒಂದು ಹಂತದ ಆತ್ಮವಿಶ್ವಾಸವನ್ನು ನೀಡುತ್ತದೆ. ಅವರು ನೆಚ್ಚುವ ಸಾಧನವಾಗಿರುತ್ತದೆ ಅದು.
2. ಅದು ಅವರ ಮತ್ತು ವಿದ್ಯಾರ್ಥಿಗಳ ನಡುವಿನ "ಸಾಮಾನ್ಯ ಕೊಂಡಿ"ಯಾಗಿರುತ್ತದೆ ಕೂಡ.
3. ಅದರ ಸಾನ್ನಿಧ್ಯದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಂದೇ ಪುಟವನ್ನು ಹಂಚಿಕೊಳ್ಳುವುದರಿಂದ ಶಿಕ್ಷಕರು ಅವರೊಂದಿಗೆ ಸಮಾನ ಸ್ತರದಲ್ಲಿ ಇರುವಂತಾಗುತ್ತದೆ.
4. ಎಲ್ಲ ತಾರತಮ್ಯವನ್ನು ಅಳಿಸಿಹಾಕುವ ಮಹಾನ್ ಸಾಧನವದು.
5. ತರಗತಿಯಲ್ಲಿ ಬಳಸಲಾಗುವ ಭಾವಿ ಬೋಧನ ಶೈಲಿಗೆ ಅದು ಚೌಕಟ್ಟೊಂದನ್ನು ಒದಗಿಸುತ್ತದೆ.

ನಿಜ ಹೇಳಬೇಕೆಂದರೆ, ಬೋಧನೆಯನ್ನು ಆರಂಭಿಸಿದ ವರ್ಷಗಳಲ್ಲಿ ನಮಗೆ ದೊರೆಯುತ್ತಿದ್ದ ಮೊಟ್ಟಮೊದಲ ಬೋಧನಾ-ಕಲಿಕಾ ಸಾಮಗ್ರಿಯೆಂದರೆ ಪಠ್ಯಪುಸ್ತಕವಾಗಿತ್ತು. ಎಲ್ಲರಿಗೂ ಸುಲಭವಾಗಿ ಲಭ್ಯವಿರದ ಕಡತವಾದ ಬೋಧನಾ ವಿಷಯದ ಪಠ್ಯಕ್ರಮದ ಕಡೆಗೆ ಬೊಟ್ಟುಮಾಡಿ, ಮಾರ್ಗದರ್ಶನ ಮಾಡುವಲ್ಲಿ ಅದು ಸಫಲವಾಗಿತ್ತು. ಅಂದರೆ, ಪಠ್ಯಪುಸ್ತಕವೊಂದೇ ಬೋಧನಾ-ಕಲಿಕಾ ಸಾಮಗ್ರಿಯೋ ಅಥವಾ ಬಳಸಲು ಲಭ್ಯವಿರುವ ಹಲವು ಸಾಮಗ್ರಿಗಳಲ್ಲಿ ಒಂದು ಅಂಗವೋ?

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಪಠ್ಯಕ್ರಮ, ಪಠ್ಯವಿಷಯ ಮತ್ತು ಪಠ್ಯಪುಸ್ತಕಗಳ ರಾಷ್ಟ್ರೀಯ ನಾಭಿ ತಂಡದ ಸ್ಥಿತಿಪತ್ರ 2005 ಇವೆಲ್ಲವೂ ಬೋಧನಾ-ಕಲಿಕಾ ಸಾಮಗ್ರಿಗಳ ವಿಷಯವಾಗಿ ಏನು ಹೇಳುತ್ತವೆಂದು ನೋಡೋಣ:

"ನಮಗಿಂದು ಅಗತ್ಯವಿರುವುದು ಯಾವುದೇ ಒಂದು ಪಠ್ಯಪುಸ್ತಕವಲ್ಲ, ಹೊರತಾಗಿ, ಮಗುವನ್ನು ಸಕ್ರಿಯ ಕಲಿಕೆಯಲ್ಲಿ ತೊಡಗಿಸಲು ಬಳಸಬಹುದಾದ ಬೋಧನಾ-ಕಲಿಕಾ ಸರಕಾಗಿದೆ. ಆದಕಾರಣ, ಪಠ್ಯಪುಸ್ತಕವು ಇದರ ಅಂಗವಾಗಿರುತ್ತದೆಯೇ ಹೊರತು, ಏಕೈಕ ಬೋಧನಾ-ಕಲಿಕಾ ಸಾಮಗ್ರಿಯಾಗಲಾರದು."

ಬೋಧನಾ ಕಲಿಕಾ ಸಾಮಗ್ರಿ ಎಂದರೆ ಯಾವುದು ಎಂದು ನೋಡಿದ ಬಳಿಕ, ಅದರ ಅಗತ್ಯವೇನೆಂದು ಸ್ವಲ್ಪ ನೋಡೋಣ. ತರಗತಿಯ ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ಇದರ ಪಾತ್ರವನ್ನು ಕುರಿತು ನಾವು ಮೇಲೆ ಹೇಳಿದ್ದೇವೆ. ಇಂತಹ ಸಾಮಗ್ರಿಯನ್ನು ತರಗತಿಯಲ್ಲಿ ಬಳಸುವುದು ಅತ್ಯಗತ್ಯವೆ? ಅಂತಹ ಸಾಮಗ್ರಿಯೆಂದು ಕರೆಯಲ್ಪಡುವ ವಸ್ತುವಿನ ಗುಣಲಕ್ಷಣಗಳೇನು? ಅದು ಬಳಸಲು ಅನುಕೂಲವಾಗುವಂತೆ ಸುಸಜ್ಜಿತವಾಗಿ ಪ್ರಸ್ತುತಪಡಿಸುವ ವಸ್ತುವಾಗಿರಬೇಕೆ ಅಥವಾ ಕಪ್ಪುಹಲಗೆ ಮತ್ತು ಸೀಮೆಸುಣ್ಣದಂತಹ ಸರಳವಾದರೂ, ಅತಿ ಪರಿಣಾಮಕಾರಿ ವಸ್ತುವಾಗಿರಬೇಕೆ? ಒಂದೂವರೆ ದಶಕಗಳಷ್ಟು ಕಾಲ ಪಠ್ಯಪುಸ್ತಕ ಲಭ್ಯವಿರದೆ ರಸಾಯನಶಾಸ್ತ್ರವನ್ನು ಪಾಠಮಾಡಿದಂತಹ ಶಿಕ್ಷಕಿಯಾಗಿ ಪಾಠ

ಹೇಳುವ ಮುನ್ನ ನನ್ನ ತಯಾರಿಯು ನನಗೆ ಲಭ್ಯವಿದ್ದ ವಿವರಣಾತ್ಮಕ ಪಠ್ಯಕ್ರಮವನ್ನು ಆಧರಿಸಿತ್ತು. ಅತಿ ಮೂಲಭೂತ ಸಾಮಗ್ರಿಯಾದ ಪಠ್ಯಪುಸ್ತಕವು ಲಭ್ಯವಿರಲಿಲ್ಲ ಎಂದು ಹೇಳಿದ್ದಾಯಿತು. ಇದರಿಂದಾಗಿ ವಿವರಣಾತ್ಮಕ ನೋಟ್ಸ್ ಮತ್ತು ಇನ್ನೂ ವಿವರಣಾತ್ಮಕ ಘಟಕ ಯೋಜನೆಗಳ ಮೂಲಭೂತ ಸಾಮಗ್ರಿಯನ್ನು ನಾವೇ ಸೃಷ್ಟಿಸಿಕೊಳ್ಳುವ ಅಗತ್ಯ ನಮಗೆ ತಲೆದೋರಿತು. ಮಿಂಚು ಪಟ್ಟಿಗಳು ಮತ್ತು ಅಭ್ಯಾಸಪತ್ರಿಕೆಗಳಂತಹ ಇನ್ನೂ ಒಂದಿಷ್ಟು (ಆಣವಿಕ ಸಂಖ್ಯೆಗಳ, ರಾಸಾಯನಿಕ ಸಮೀಕರಣ ಸಮತೋಲನದ ಹಾಗೂ ರಾಸಾಯನಿಕ ಪ್ರಕ್ರಿಯೆಗಳ ಮಧ್ಯಹಂತಗಳನ್ನು ಹೊಂದಿಸುವಂತಹ ಇತ್ಯಾದಿ) ಸಾಮಗ್ರಿಗಳು ನಮಗೆ ಕಾಲಕ್ರಮೇಣ ಒದಗಿಬಂದ ಇತರ ವಸ್ತುಗಳಾಗಿದ್ದವು. ನಾವಾಗೆ ಸೃಷ್ಟಿಸಿಕೊಂಡ ಸಾಮಗ್ರಿಗಳು ಒಂದು ನಿರ್ದಿಷ್ಟ ರೀತಿಯ ಕಲಿಕಾ ಉದ್ದೇಶದ ಹಾಗೂ ಬಳಸಲಾದ ಬೋಧನಶೈಲಿಯ (ಈ ಹಿಂದೆ ಹೇಳಿರುವಂತೆ) ಪೂರೈಕೆಯನ್ನು ಆಧರಿಸಿದ್ದವು.

ಯಾವುದೇ ಸಾಮಗ್ರಿ ಹೇಗೆ ತರಗತಿಯಲ್ಲಿ ಬಳಕೆಯಾಗುತ್ತದೆ ಎಂಬುದಕ್ಕೆ ವಿಭಿನ್ನ ದೃಷ್ಟಿಕೋನಗಳಿರಬಹುದು. ಪ್ರೇರೇಪಿತರಾದ, ತಮ್ಮ ಕೆಲಸದಲ್ಲಿ ಬದ್ಧತೆ ಪ್ರದರ್ಶಿಸುವಂತಹ ಶಿಕ್ಷಕರಿಗೆ ಬೋಧನ ಸಾಮಗ್ರಿಯೊಂದು ಪ್ರದರ್ಶಕ ವಸ್ತುವಾಗಿರುವುದಿಲ್ಲ; ಬದಲಿಗೆ, ಅದು ಆಗಲೇ ಆಯೋಜಿಸಲ್ಪಟ್ಟ ಅವರ ಬೋಧನಶೈಲಿಯೊಂದಿಗೆ ಸೇರಿಕೊಳ್ಳುವ ವಸ್ತುವಾಗಿರುತ್ತದೆ. ಇದು ತರಗತಿಯಲ್ಲಿ ಅವರ ಪಾಠವನ್ನು ಪರಿಣಾಮಕಾರಿಯನ್ನಾಗಿಸಿ, ಅವರ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಂಡು, ಕಲಿಕೆಗೆ ಬೆಂಬಲವಾಗಿ ನಿಲ್ಲುತ್ತದೆ. ಹೀಗಾಗಿ, ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಾಗಿ ಬಳಸಲಾಗುವ ಸಾಮಗ್ರಿಯ ಉದ್ದೇಶವನ್ನು ವ್ಯಾಖ್ಯಾನಿಸುವುದು ಅತಿ ಮುಖ್ಯವಾಗುತ್ತದೆ. ಇಲ್ಲಿ ಉದಾಹರಣೆಯೊಂದನ್ನು ಪರಿಗಣಿಸೋಣ. ಆಧುನಿಕ ಆವರ್ತಕ ಕೋಷ್ಟಕವು ಶಾಲಾ ರಸಾಯನಶಾಸ್ತ್ರದ ಬಹು ಮುಖ್ಯ ಅಂಗ. ಬಹುತೇಕ ಪಠ್ಯಪುಸ್ತಕಗಳು ಹಾಗೂ ಬಹುತೇಕ ತರಗತಿಗಳು ಇದರ ಮಾದರಿಯೊಂದನ್ನು ಹೊಂದಿರುತ್ತವೆ. ಈ ಸಂಪನ್ಮೂಲವನ್ನು ವರ್ಷದ ಉದ್ದಕ್ಕೂ, ಕೇವಲ ಧಾತುಗಳ ವರ್ಗೀಕರಣದ ವಿಷಯವನ್ನು ಬೋಧಿಸುವಾಗ ಮಾತ್ರವಲ್ಲದೆ, ಧಾತುಗಳ ವಿಚಾರವನ್ನು ಉಲ್ಲೇಖಿಸುವಾಗೆಲ್ಲ ಬಳಸಬಹುದಾಗಿದೆ. ಆವರ್ತಕ ಕೋಷ್ಟಕದಲ್ಲಿ ಧಾತುವನ್ನು ಗುರುತಿಸುವುದು, ಅದರ ಸ್ಥಾನವನ್ನು ಅರಿಯುವುದು, ಅದರ ಗುಣಲಕ್ಷಣಗಳನ್ನು ಹಾಗೂ ಅದರ ಸ್ಥಾನಿಕ ಪರಿಣಾಮಗಳನ್ನು ಅರಿಯುವ ವಿಚಾರವದು. ಮತ್ತೊಂದು ಉದಾಹರಣೆಯೆಂದರೆ, (ಹಲವು ಶಾಲೆಗಳಲ್ಲಿ ಅಸ್ತಿತ್ವದಲ್ಲಿರದ) ವಿಜ್ಞಾನ ಪ್ರಯೋಗಾಲಯದ ಬಳಕೆಯದ್ದಾಗಿದೆ. ಮೂಲಭೂತ ವಸ್ತುಗಳಿಂದ ಸುಸಜ್ಜಿತವಾದ ಪ್ರಯೋಗಾಲಯವು ಹಲವು ಪರಿಕಲ್ಪನೆಗಳನ್ನು ಬೋಧಿಸಲು ಒಂದು ಹಿತಕರವಾದ ಬೋಧನಾ-ಕಲಿಕಾ ಸಾಮಗ್ರಿಯಾಗಿದೆ. ಹೀಗಾಗಿ, ವಸ್ತುವೊಂದರ ಉದ್ದೇಪೂರ್ವಕ ಬಳಕೆ ಶಿಕ್ಷಕರ ಕೈಯಲ್ಲಿದೆ; ಅಂತೆಯೇ, ಸೂಕ್ತ ಸಾಮಗ್ರಿಯನ್ನು ಆಯ್ಕೆ ಮಾಡುವ ಅವರ ವಿವೇಕದಲ್ಲಿ ಹಾಗೂ ಅವರ ತರಗತಿಯಲ್ಲಿ ಅದರ ಬಳಕೆಯಲ್ಲಿದೆ.

## ಸಮಾಜ-ವಿಜ್ಞಾನ ತರಗತಿಯಲ್ಲಿ ಸಜೀವ ಪಠ್ಯಪುಸ್ತಕಗಳು

ಹಲವು ಸಂಗತಿಗಳ ನಡುವೆ, ನಮ್ಮ ಸಮಾಜ-ವಿಜ್ಞಾನ ತರಗತಿಗಳು ನಮ್ಮ ಕಣ್ಮುಂದೆ ಬರುತ್ತವೆ. ಅಲ್ಲಿ ಪಠ್ಯಪುಸ್ತಕವನ್ನು ತೆರೆದಿಟ್ಟುಕೊಂಡು ಶಿಕ್ಷಕರು ಒಂದಾದ ಬಳಿಕ ಮತ್ತೊಂದರಂತೆ ವಾಕ್ಯಗುಚ್ಛಗಳನ್ನು ಮಕ್ಕಳಿಂದ ಓದಿಸಿ, ಪಾಠಮಾಡಿ ಮುಗಿಸಿ, ಅಲ್ಲಿನ ಮುಖ್ಯ ಸಂಗತಿಗಳನ್ನು ಪಠ್ಯಪುಸ್ತಕದಲ್ಲಿ ಇರುವಂತೆಯೇ ಪರೀಕ್ಷೆಯಲ್ಲಿ ಒಪ್ಪಿಸಲು ಆಗುವಂತೆ ಅವುಗಳನ್ನು ಗುರುತು ಹಾಕಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ಪಠ್ಯಪುಸ್ತಕವನ್ನು ಅತ್ಯಧಿಕವಾಗಿ ಬಳಸಿದ ನಮ್ಮ ಆಂಗ್ಲಭಾಷಾ ಅಧ್ಯಾಪಕರು ನೆನಪಾಗುತ್ತಾರೆ. ವರ್ಷದ ಕೊನೆಗೆ ನಮ್ಮ ಪಠ್ಯಪುಸ್ತಕಗಳ ಮೇಲೆಲ್ಲಾ ಟಿಪ್ಪಣಿ, ಸಾರಾಂಶ, ತಾತ್ಪರ್ಯಗಳು ಹಾಗೂ ಉಪಮೆ, ರೂಪಕ, ಶ್ಲೇಷೆ ಇತ್ಯಾದಿಗಳ ಪೆನ್ಸಿಲ್ ಗುರುತುಗಳಿಂದ ತುಂಬಿಹೋಗಿರುತ್ತಿತ್ತು. ಇಡೀ ಪಠ್ಯಪುಸ್ತಕವನ್ನೊಮ್ಮೆ ತಿರುವಿಹಾಕುವ ಅನುಭವವು ಖುಷಿ, ಸಂಭ್ರಮ ಮತ್ತು

ಸಂವೇದನಾತ್ಮಕ ಸಮೃದ್ಧಿಯ ಭಾವದೊಂದಿಗೆ ಮಿಳಿತವಾಗಿರುತ್ತಿತ್ತು. ಆದರೆ, ನಾನು ಇದುವರೆಗೂ ಸುಮಾರು 30-40 ವರ್ಷಗಳ ಹಿಂದೆ ರೂಪಿಸಲಾದ ಪಠ್ಯಪುಸ್ತಕಗಳ ಬಗ್ಗೆ ಹೇಳುತ್ತಿದ್ದೇನೆ. ಆಗಿನ ಕಾಲದಲ್ಲೂ, ಪಠ್ಯಪುಸ್ತಕಕ್ಕೆ ಜೀವ ತುಂಬಿ, ಅದರೊಂದಿಗೆ ವಿದ್ಯಾರ್ಥಿಯ ಒಡನಾಟವನ್ನು ಹುಟ್ಟುಹಾಕುವ ಸಾಮರ್ಥ್ಯ ಶಿಕ್ಷಕರಿಗೆ ಇರುತ್ತಿತ್ತು. ಅಂದರೆ, ನಮ್ಮೊಂದಿಗೆ ಮಾತನಾಡಬಲ್ಲ, ಒಡನಾಡಬಲ್ಲ ಪಠ್ಯಪುಸ್ತಕ. ಸತ್ಯಸಂಗತಿ ಇಂತಿರುವಾಗ, ಪಠ್ಯಪುಸ್ತಕಗಳನ್ನೇಕೆ ಬೇಸರ ತರಿಸುವ ಸಾಮಗ್ರಿಯಂತೆ ನೋಡಲಾಗುತ್ತಿದೆ, ಅಥವಾ, ಅದನ್ನೊಂದು ಪ್ರಯೋಜನಕಾರಿ ಬೋಧನಾ-ಕಲಿಕಾ ಸಾಮಗ್ರಿ ಎಂದು ಸಹ ಯಾಕೆ ಪರಿಗಣಿಸಲಾಗುತ್ತಿಲ್ಲ?

ಆದ್ದರಿಂದ, ಪಠ್ಯಪುಸ್ತಕವೇ ಹೇಗೆ ಒಂದು ಪ್ರಯೋಜನಕಾರಿ ಬೋಧನಾ-ಕಲಿಕಾ ಸಾಮಗ್ರಿಯಾಗಬಹುದು ಎಂಬುದೇ ವಿಸ್ತೃತ ಚರ್ಚೆಯ ವಿಷಯ ಆಗಬೇಕು. 2005ರ ಬಳಿಕ ಸಮಾಜ-ವಿಜ್ಞಾನದ ಬೋಧನೆಯು ಶಿಕ್ಷಕರಿಗೆ ಗಮನಾರ್ಹವಾಗಿಯೂ ಒಂದು ವಿಭಿನ್ನ ಅನುಭವವಾಗಿ ಹೊರಹೊಮ್ಮಿದೆ. ಇತಿಹಾಸ ಪಠ್ಯಪುಸ್ತಕದ ವಿಷಯವಾದ ದಿನನಿತ್ಯದ ಜೀವನ, ಸಂಸ್ಕೃತಿ ಮತ್ತು ರಾಜಕಾರಣದ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಅದು ನಮ್ಮನ್ನು ಇತಿಹಾಸ ಮತ್ತು ಕ್ರೀಡೆಯ ಅಧ್ಯಾಯಕ್ಕೆ ಪರಿಚಯಿಸುತ್ತದೆ. ಈ ಅಧ್ಯಾಯದಲ್ಲಿ ಹಲವಾರು ಪ್ರಾಥಮಿಕ ಹಾಗೂ ಆನುಷಂಗಿಕ ಮೂಲಗಳನ್ನು ಬಳಸಿಕೊಳ್ಳಲಾಗಿದೆ. ಪಠ್ಯಪುಸ್ತಕದ ಬಳಕೆಯು ಶಿಕ್ಷಕರು ತರಗತಿಯಲ್ಲಿ ಹಲವು ದೃಷ್ಟಿಕೋನಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಅನುಕೂಲ ಮಾಡಿಕೊಡುವುದೇ ಅಲ್ಲದೆ, ವಿದ್ಯಾರ್ಥಿಗಳನ್ನು ಮೂಲ ಲೇಖನಗಳಿಗೆ ಪರಿಚಯಿಸಲು ಒದಗಿಬರುತ್ತದೆ. ಇದರಿಂದ, ವಿಭಿನ್ನ ಮೂಲಗಳನ್ನು ಸಮನ್ವಯಗೊಳಿಸುವ ಹಾಗೂ ವ್ಯಾಖ್ಯಾನಿಸುವ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಅಭಿವೃದ್ಧಿಗೊಳಿಸಲು ನೆರವಾಗುತ್ತದೆ ಕೂಡ.

**ಬಾಕ್ಸ್ ೧ ಮೂಲ A**
**ಜಾತಿ ಮತ್ತು ಕ್ರಿಕೆಟ್**

ಪಲವಂಕರ್ ಬಾಲೂ ಅವರು ಪುಣೇ ನಗರದಲ್ಲಿ 1875ರಲ್ಲಿ ಜನಿಸಿದರು. ಅವರು ತಮ್ಮ ಕಾಲದ ಅತ್ಯುತ್ತಮ ನಿಧಾನಗತಿಯ ಬೌಲರ್ ಎನಿಸಿಕೊಂಡಿದ್ದರೂ ಅವರ ಕಾಲದಲ್ಲಿ ಭಾರತೀಯರು ಟೆಸ್ಟ್ ಪಂದ್ಯಗಳನ್ನು ಆಡುವಂತಿರಲಿಲ್ಲ. ಅಂದಿನ ವಸಾಹತುಶಾಹಿ ಕಾಲಘಟ್ಟದಲ್ಲಿ ಪ್ರಮುಖ ಕ್ರಿಕೆಟ್ ಪಂದ್ಯಾವಳಿಯಾದ "ಚತುರ್ಭುಜೀಯ ಪಂದ್ಯ"ದಲ್ಲಿ ಅವರು "ಹಿಂದೂ"ಗಳ ಪರವಾಗಿ ಆಡಿದ್ದರು. ದಲಿತರಾಗಿದ್ದ ಅವರು ತಂಡದ ಅತಿ ಶ್ರೇಷ್ಠ ಕ್ರೀಡಾಪಟುವಾಗಿದ್ದರೂ ಅವರನ್ನು ಹಿಂದೂ ತಂಡದ ನಾಯಕನನ್ನಾಗಿ ಎಂದೂ ಮಾಡಲಿಲ್ಲ; ಏಕೆಂದರೆ, ಮೇಲ್ಜಾತಿಯ ಆಯ್ಕೆಗಾರರು ಅವರ ವಿರುದ್ಧ ತಾರತಮ್ಯ ತೋರುತ್ತಿದ್ದರು. ಆದರೆ, ಬ್ಯಾಟ್ಸ್ ಮನ್ ಆಗಿದ್ದ ಅವರ ತಮ್ಮ ವಿಠಲರು 1923ರಲ್ಲಿ ಹಿಂದೂ ತಂಡದ ನಾಯಕರಾಗಿ, ಯುರೋಪಿಯನ್ನರ ವಿರುದ್ಧ ತಮ್ಮ ತಂಡವು ಅಂದಿನ ಪ್ರಸಿದ್ಧ ಜಯವನ್ನು ದಾಖಲಿಸಲು ಕಾರಣರಾದರು. ವೃತ್ತಪತ್ರಿಕೆಯೊಂದಕ್ಕೆ ಪತ್ರ ಬರೆದ ಕ್ರಿಕೆಟ್ ಅಭಿಮಾನಿಯೊಬ್ಬರು ಹಿಂದೂ ತಂಡದ ಜಯಕ್ಕೂ, ಗಾಂಧೀಜಿಯವರ ಅಸ್ಪೃಶ್ಯತೆಯ ವಿರುದ್ಧದ ಹೋರಾಟಕ್ಕೂ ಸಂಬಂಧ ಕಲ್ಪಿಸಿದ್ದರು. ಹಿಂದೂ ತಂಡದವರು ಅಸ್ಪೃಶ್ಯರಾಗಿ ಜನಿಸಿದ್ದ ಭಾರತದ ಪ್ರಮುಖ ಬೌಲರ್ ಬಾಲೂ ಅವರ ತಮ್ಮ ವಿಠಲ್ ಅವರನ್ನು ಹಿಂದೂ ತಂಡದ ನಾಯಕನನ್ನಾಗಿಸಿದರು. ಹಿಂದೂ ತಂಡದ ಅಭೂತಪೂರ್ವ ಜಯದಿಂದ ನಾವು ಕಲಿಯಬಹುದಾದ ಪಾಠವೆಂದರೆ ಅಸ್ಪೃಶ್ಯತೆಯ ನಿರ್ಮೂಲನವು ಭಾರತವನ್ನು ಸ್ವರಾಜ್ಯದತ್ತ ಒಯ್ಯುತ್ತದೆ ಎಂಬುದಾಗಿದೆ. ಇದೇ ಮಹಾತ್ಮರ ಭವಿಷ್ಯವಾಣಿಯೂ ಆಗಿದೆ.

"ವಿದೇಶಿ ಮೈದಾನವೊಂದರ ಮೂಲೆ", ರಾಮಚಂದ್ರ ಗುಹಾ ಅವರ ಲೇಖನದಿಂದ

## ದೃಕ್-ಶ್ರವಣ ಸಾಮಗ್ರಿಗಳು

ತಾಂತ್ರಿಕ ಕ್ಷೇತ್ರದಲ್ಲಿ ಮುನ್ನಡೆಯಾದಂತೆ ದೃಕ್-ಶ್ರವಣ ಸಾಮಗ್ರಿಗಳು ಇತ್ತೀಚಿನ ದಿನಗಳ ನೂತನ ಬೋಧನಾ-ಕಲಿಕಾ ಸಾಮಗ್ರಿಗಳಾಗಿ ಹೊರಹೊಮ್ಮಿವೆ. ಈ ಬೋಧನಾ-ಕಲಿಕಾ ಸಾಮಗ್ರಿಗಳ ಬಳಕೆಯು ಅರ್ಥಪೂರ್ಣವೂ, ಪ್ರಸ್ತುತವೂ ಆಗಿರಬೇಕು. ಇಲ್ಲವಾದಲ್ಲಿ, ಅದೊಂದು ಮನೋರಂಜನೆಯ ಸಾಧನವಾಗುತ್ತದಷ್ಟೆ. ಯಾವುದೇ ಚಲನಚಿತ್ರ ಅಥವಾ ಸಾಕ್ಷ್ಯಚಿತ್ರವನ್ನು ತೋರಿಸಲು ಶಿಕ್ಷಕರ ಮನದಲ್ಲಿ ಒಂದು ನಿರ್ದಿಷ್ಟ ಉದ್ದೇಶವಿರಬೇಕಾಗುತ್ತದೆ. ಅದು ವಿದ್ಯಾರ್ಥಿಗಳ ವಯೋಮಾನಕ್ಕೆ ಸೂಕ್ತವೂ, ಬೋಧಿಸಲಾಗುವ ವಿಷಯಕ್ಕೆ ಸಂಗತವಾದದ್ದೂ ಆಗಿರಬೇಕಾಗುತ್ತದೆ. ದೃಕ್-ಶ್ರವಣ ಸಾಮಗ್ರಿಗಳ ಬಳಕೆಗೆ ಮುನ್ನ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರಲ್ಲೂ ಅದಕ್ಕಾಗಿ ತಯಾರಿ ನಡೆಯುವುದು ಆವಶ್ಯಕವಾಗುತ್ತದೆ. ಈ ತಯಾರಿಯು ತಾವು ನೋಡಲಿರುವ ಅಥವಾ ಕೇಳಲಿರುವ ವಿಷಯಕ್ಕೂ, ಅಧ್ಯಾಯದ ವಿಷಯಕ್ಕೂ ಇರುವ ಸಂಬಂಧವನ್ನು ಅರಿಯುವುದನ್ನು ಒಳಗೊಂಡಿರುತ್ತದೆ. ದೃಕ್-ಶ್ರವಣ ಸಾಮಗ್ರಿಯ ಬಳಕೆಯ ಮುನ್ನ ವಿದ್ಯಾರ್ಥಿಗಳು ಉತ್ತರಿಸಬೇಕಿರುವ ಪ್ರಶ್ನಾವಳಿಲಿಯೊಂದನ್ನು ಸಜ್ಜುಮಾಡಿ ಇಟ್ಟುಕೊಂಡಿರುವುದು ಅವರು ನಿಷ್ಕ್ರಿಯ ವೀಕ್ಷಕರಾಗುವ ಬದಲು ಸಕ್ರಿಯ ವೀಕ್ಷಕರಾಗುವುದನ್ನು ಖಾತ್ರಿಪಡಿಸಬಹುದಾದ ಒಂದು ವಿಧಾನ.

ಇಲ್ಲಿ ಎಚ್ಚರಿಕೆಯೊಂದನ್ನು ನೀಡುವುದು ಉಚಿತವಾಗುತ್ತದೆ: ದೃಕ್-ಶ್ರವಣ ಸಾಧನಗಳ ಅತಿಯಾದ ಬಳಕೆಯಿಂದ ವಿದ್ಯಾರ್ಥಿಗಳನ್ನು ತರಗತಿಯಲ್ಲಿ ವಿರಾಮದ ಸಮಯಕ್ಕಾಗಿ ಎದುರು ನೋಡುವ ಪ್ರವೃತ್ತಿಯ ನಿಷ್ಕ್ರಿಯ ವೀಕ್ಷಕರನ್ನಾಗಿಸುವ ಅಪಾಯವಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ನಿಮ್ಮೊಡನೆ ಸನ್ನಿವೇಶವೊಂದನ್ನು ಹಂಚಿಕೊಳ್ಳಲು ನಾವು ಬಯಸುತ್ತೇವೆ: ಶಿಕ್ಷಕರೊಬ್ಬರು, "ಹಿಟ್ಲರ್ ಮತ್ತು ನಾಜಿವಾದದ ಹುಟ್ಟು" ಎಂಬ ಅಧ್ಯಾಯವನ್ನು ಅದೇ ತಾನೆ ಮಾಡಿ ಮುಗಿಸಿರುತ್ತಾರೆ; ಅವರು ವಿದ್ಯಾರ್ಥಿಗಳಿಗೆ "ದ ಪಿಯಾನಿಸ್ಟ್" ಎಂಬ ಚಲನಚಿತ್ರವನ್ನು ತೋರಿಸುವುದಾಗಿ ಮಾತು ಕೊಡುತ್ತಾರೆ. ಚಲನಚಿತ್ರವನ್ನು ನೋಡಿದ ವಿದ್ಯಾರ್ಥಿಗಳು ತಮ್ಮ ತರಗತಿಗಳಿಗೆ ಮರಳುತ್ತಾರೆ. ಮರುದಿನ ಅದೇ ಶಿಕ್ಷಕರು ಹೊಸದೊಂದು ಅಧ್ಯಾಯವನ್ನು ಕೈಗೆತ್ತಿಕೊಳ್ಳುತ್ತಾರೆ. ಈ ಒಂದು ವಿಶಿಷ್ಟ ಸನ್ನಿವೇಶದಲ್ಲಿ ಆ ಅಧ್ಯಾಪಕರು ದೃಕ್-ಶ್ರವಣ ಸಾಧನವನ್ನು ಬೋಧನಾ-ಕಲಿಕಾ ಸಾಮಗ್ರಿಯಾಗಿ ಬಳಸಿಕೊಂಡಿದ್ದರು. ಇದರಿಂದ ವಿದ್ಯಾರ್ಥಿಗಳ ಕಲಿಕಾ ಅನುಭವದ ವೃದ್ಧಿಯಾಯಿತೆ? ಆಗಿದ್ದಿರಬಹುದು, ಆಗದೇ ಹೋಗಿರಬಹುದು ಕೂಡ. ಅತಿ ದುಬಾರಿ ಶಾಲೆಗಳಲ್ಲಿ ಶಾಲಾ ನಿರ್ವಹಣಾ ಸಮಿತಿಯ ಕಡೆಯಿಂದ ಹಾಗೂ ತಮ್ಮ ಸಹೋದ್ಯೋಗಿಗಳ ಕಡೆಯಿಂದ ಶಿಕ್ಷಕರ ಮೇಲೆ ಕೆಲವೊಮ್ಮೆ ಒತ್ತಡಗಳು ಬರುವುದುಂಟು. ಈ ಒತ್ತಡದ ದೆಸೆಯಿಂದಾಗಿ ಅವರು ತಮ್ಮ ತರಗತಿಯ ಸೊಗಸುಗಾರಿಕೆ ಹಾಗೂ ತರಗತಿಯ ಘನತೆಗಳನ್ನು ವೃದ್ಧಿಸಲು ಮಾತ್ರ ತಂತ್ರಜ್ಞಾನದ ಬಳಕೆಗೆ ಮುಂದಾಗುವ ಸಾಧ್ಯತೆ ಇರುತ್ತದೆ.

## ಇಂದಿನ ಸುದ್ದಿ ಮುಂದಿನ ಇತಿಹಾಸ: ವೃತ್ತಪತ್ರಿಕೆ ಮತ್ತು ವ್ಯಂಗ್ಯಚಿತ್ರ

ಸಮಾಜ-ವಿಜ್ಞಾನದ ಪುಸ್ತಕಗಳಲ್ಲಿ ಹಲವು ರೀತಿಯ ಹಾಗೂ ವಿಶಾಲವ್ಯಾಪ್ತಿಯ ವ್ಯಂಗ್ಯಚಿತ್ರಗಳನ್ನು ಅಳವಡಿಸಿಕೊಂಡಿರುವುದು ಅವುಗಳನ್ನು ಪ್ರಭಾವಕಾರಿಯಾಗಿಸಿದೆ, ಶ್ರೀಮಂತವಾಗಿಸಿದೆ. ಅವುಗಳಲ್ಲಿನ ರಾಜಕೀಯ ವ್ಯಂಗ್ಯಚಿತ್ರಗಳು ಪ್ರಸಕ್ತ ಪರಿಸ್ಥಿತಿಯ ಬಗ್ಗೆ ವ್ಯಾಖ್ಯಾನಿಸುವಂತೆ ಇರುತ್ತವೆ. ಆದ್ದರಿಂದ, ನಾವು ಅವುಗಳನ್ನು ನಗು ತರಿಸುವ, ಹಾಸ್ಯಾತ್ಮಕ ಲಕ್ಷಣಗಳುಳ್ಳ ಚಿತ್ರವೆಂದು ನೋಡುತ್ತೇವೆಯೋ ಅಥವಾ ಅದು ಅದಕ್ಕಿಂತಲೂ ಬಹಳಷ್ಟು ಹೆಚ್ಚಿನದೇನನ್ನೋ ಶ್ರುತಪಡಿಸುತ್ತಿದೆ ಎಂದು ನೋಡುತ್ತೇವೆಯೋ? "ಸಮಾಜ ಹಾಗೂ ರಾಜಕೀಯ ಜೀವನ"ದ ಪಠ್ಯಪುಸ್ತಕದಲ್ಲಿ ಉದ್ಧರಿಸಿರುವಂತೆ ನಾವು ಅದನ್ನು ಕೇವಲ ಚಿತ್ರಗಳನ್ನಾಗಿ ನೋಡಿ, ಪುಟ ತಿರುವಿ ಹಾಕದೆ, ಅಲ್ಲಿನ ಚಿತ್ರಗಳನ್ನು ಓದಿ,

ಅರ್ಥಮಾಡಿಕೊಳ್ಳುವುದನ್ನು ನಿರೀಕ್ಷಿಸಲಾಗುತ್ತದೆ. ಏಕೆಂದರೆ, ಬಹಳಷ್ಟು ಬಾರಿ ರಾಜಕಾರಣವು ಸ್ಫುಟವಾದ ಪದಗಳ ಮೂಲಕವಲ್ಲದೆ ಪ್ರತೀಕಗಳ ಮೂಲಕ ನಡೆಯುತ್ತದೆ. ಅವಲೋಕನ, ವ್ಯಾಖ್ಯಾನ, ವಿಶ್ಲೇಷಣೆ ಹಾಗೂ ದೃಗ್ಗೋಚರ ವಸ್ತುಗಳ ಬಗೆಗಿನ ಚಿಂತನೆಗಳ ಕೌಶಲಗಳಿಗೆ ಮೆರಗು ಕೊಡಲು ಕೂಡ ಇವುಗಳನ್ನು ಬಳಸಬಹುದಾಗಿದೆ.

## ಬೋಧನ ಕಲಿಕಾ ಸಾಮಗ್ರಿಯಾಗಿ ವೃತ್ತಪತ್ರಿಕೆಯ ಸುದ್ದಿಗಳ ಬಳಕೆ

ವಿದ್ಯಾರ್ಥಿಗಳಲ್ಲಿ ಕುತೂಹಲವನ್ನು ಹುಟ್ಟುಹಾಕುವ ಆಸಕ್ತಿದಾಯಕ ವಿಧಾನವೆಂದರೆ ತರಗತಿಗಳಿಗೆ ವೃತ್ತಪತ್ರಿಕೆಗಳನ್ನು ಒಯ್ಯುವುದು. ಇದು ವಿದ್ಯಾರ್ಥಿಗಳು ವೃತ್ತಪತ್ರಿಕೆಗಳನ್ನು ಓದಲು ಉಪಕ್ರಮಿಸುವಂತೆ ಮಾಡುವ ಒಂದು ವಿಧಾನವಾಗಿದೆ. ಇದರ ಬಳಕೆಯಿಂದ ಗತಕಾಲದ ಸಂಗತಿಗಳಿಂದ ಹಿಡಿದು ಪ್ರಸ್ತುತ ಸಂಗತಿಗಳವರೆಗಿನ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ. ಇದರಿಂದ ಸಮೃದ್ಧವೂ, ವಿಭಿನ್ನವೂ ಆದ ಚರ್ಚೆಗಳನ್ನು ತರಗತಿಯಲ್ಲಿ ಹುಟ್ಟುಹಾಕುವುದು ಸಾಧ್ಯವಾಗುತ್ತದಲ್ಲದೆ, ಬೋಧಿಸುತ್ತಿರುವ ವಿಷಯವನ್ನು ಅರ್ಥಪೂರ್ಣವನ್ನಾಗಿಸಿ, ತರಗತಿ ಮತ್ತು ಹೊರಗಿನ ಪ್ರಪಂಚದ ನಡುವಿನ ಕೊಂಡಿಯೊಂದನ್ನು ಕಟ್ಟಿಕೊಡುವಲ್ಲಿ ನೆರವು ದೊರೆಯುತ್ತದೆ. ಈ ವಿಧಾನದ ಅನಾನನುಕೂಲತೆಯೆಂದರೆ, ಒಂದೇ ಸುದ್ದಿಯನ್ನು ಹಲವು ರೀತಿಗಳಲ್ಲಿ ಪ್ರಸ್ತುತಪಡಿಸುವುದು ಹೇಗೆ ಸಾಧ್ಯ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವು ಒಮ್ಮೆಗೆ ಎರಡು ಅಥವಾ ಮೂರು ವೃತ್ತಪತ್ರಿಕೆಗಳ ಮೊರೆಹೋಗಬೇಕಾಗುತ್ತದೆ.

ಅಂದರೆ, ಕೇವಲ ಯಾವುದೇ ವಸ್ತುವಿನ ಗುಣವು ಅದನ್ನೊಂದು ಬೋಧನಾ-ಕಲಿಕಾ ಸಾಮಗ್ರಿಯಾಗಿಸಲಾರದು; ಬದಲಿಗೆ, ತರಗತಿಯಲ್ಲಿನ ಬೋಧನೆ ಮತ್ತು ಕಲಿಕೆಗೆ ಅದರ ಬಳಕೆಯೇ ಅದನ್ನೊಂದು ಬೋಧನಾ-ಕಲಿಕಾ ಸಾಮಗ್ರಿಯನ್ನಾಗಿ ಪರಿವರ್ತಿಸುತ್ತದೆ ಎಂಬ ತೀರ್ಮಾನಕ್ಕೆ ಬರಬಹುದಾಗಿದೆ. ಹೀಗಾಗಿ, ಅರ್ಹತೆ ಇದ್ದರೂ ಜನಪ್ರಿಯವಲ್ಲದ ಪಠ್ಯಪುಸ್ತಕಗಳನ್ನು ಬೋಧನಾ-ಕಲಿಕಾ ಸಾಮಗ್ರಿಯೆಂದು ಪರಿಗಣಿಸುವುದು ಪರಿಣಾಮಕಾರಿ ವಿಧಾನವಾಗಬಹುದಷ್ಟೇ ಅಲ್ಲ, ನಾವು ಸಾದರಪಡಿಸುತ್ತಿರುವ ಮಾದರಿಗಳು, ನಕ್ಷೆಗಳು ಅಥವಾ ವಿಡಿಯೋ ತುಣುಕುಗಳಂತಹವು ಸಹ ತರಗತಿಯಲ್ಲಿ ಯಾವುದೇ ಅರ್ಥಪೂರ್ಣ ಕಲಿಕೆಯ ಕಿಡಿ ಹೊತ್ತಿಸಲು ಸಾಧ್ಯವಾಗದೇ ಹೋಗಬಹುದಾಗಿದೆ.

**ಚಂದ್ರಿಕಾ** ಅವರು ಕಳೆದ ಒಂಬತ್ತು ರ್ಷಗಳಿಂದ ಅಜೀಂ ಪ್ರೇಮ್ ಜಿ ಫೌಂಡೇಶನ್ನಿನ ಅಂಗವಾಗಿದ್ದಾರೆ. ಇವರು ಸದ್ಯ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯ ಸ್ಕೂಲ್ ಆಫ್ ಕನ್ಟಿನ್ಯೂಯಿಂಗ್ ಎಜುಕೇಷನ್ ಮತ್ತು ಯೂನಿವರ್ಸಿಟಿ ಸಂಪನ್ಮೂಲ ಕೇಂದ್ರದ ಭಾಗವಾಗಿದ್ದು, ವೃತ್ತಿಪರ ವಿಕಾಸದ ಕಾರ್ಯಕ್ರಮಗಳಿಗೆ ಕೊಡುಗೆ ನೀಡುತ್ತಿದ್ದಾರೆ. ಇವರು ವಿಜ್ಞಾನ ಶಿಕ್ಷಣ, ಶಿಕ್ಷಕರ ಸಾಮರ್ಥ್ಯ ವೃದ್ಧಿ ಹಾಗೂ ಪಠ್ಯಪುಸ್ತಕ ರಚನೆಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಅಜೀಂ ಪ್ರೇಮ್ ಜಿ ಫೌಂಡೇಶನ್ ಹೊರತರುವ ಪ್ರಕಟಣೆಗಳ ಸಂಪಾದಕ ತಂಡದ ಅವಿಭಾಜ್ಯ ಅಂಗವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರನ್ನು chandrika@azimpremjifoundation.org ಇ-ಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದಾದ

**ರೋಹಿತಾ** ಅವರು ಸದ್ಯ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯ ಮೌಲ್ಯಮಾಪನ ಮತ್ತು ದೃಢೀಕರಣ ಸಂಸ್ಥೆಯಲ್ಲಿ ಕಾರ್ಯನಿರತರಾಗಿದ್ದಾರೆ. ಅವರು ಶಿಕ್ಷಕರಿಗಾಗಿ ಸಾಮರ್ಥ್ಯವೃದ್ಧಿಯ ಕಾರ್ಯಕ್ರಮಗಳನ್ನು, ವ್ಯಾಪಕ ಪ್ರಮಾಣದ ಮೌಲ್ಯಮಾಪನ ಮತ್ತು ಪಠ್ಯಪುಸ್ತಕ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಒಂದು ದಶಕಕ್ಕೂ ಮೀರಿ ಸಮಾಜ ವಿಜ್ಞಾನವನ್ನು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ತರಗತಿಗಳಿಗೆ

ಬೋಧಿಸಿದ್ದಾರೆ. ಇವರನ್ನು ronita.sharma@azimpremjifoundation.org ಇ-ಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದು.

==========